ಶ್ರೀ ಎ. ಆರ್. ಬದರೀನಾರಾಯಣ.—ಈ ವಿಚಾರವನ್ನು ಹೇಳುತ್ತಾ **ಶ್ರೀಮಾನ್ ಸಿದ್ದಪ್ಪ** ನವರು ಒಂದು ಮಾತನ್ನು ಹೇಳಿದರು, ಈಗ ಪೈಸ್ಟಫನ್ನಲರ್ ಆಗಿರುವವರ ವಿಚಾರದಲ್ಲಿ ತಮಗೆ ಗೌರವವಿದೆ ಎಂದು ಪ್ರೀಠಿಕೆಯಲ್ಲಿ ಹೇಳಿ ಮುಂದಕ್ಕೆ ಹೋಗಿದ್ದಾರೆ. ಈ ವಿಚಾರದಲ್ಲಿ ನನ್ನ ಗಮನಕ್ಕೆ ಬಂದಿರುವುದು ಕಂಟ್ರೋಲರ್ ಆಫ್ ಎಗ್ಸಾಮಿನೇಷನ್ಸ್‌ನಿಂದ ಅಧಿಕೃತವಾಗಿ ಬಂದಿರುವುದು 4 ಪ್ರಶ್ನೆ ಪತ್ರಿಕೆಗಳು ಲೀಕ್ ಆಗಿವೆ ಎಂದು. ಮೇಜರ್ ಬಾಷಾ ನಂಬರ್ 3 ಈ ಪ್ರಶ್ನೆಪತ್ರಿಕೆ 6ನೇ ತಾರೀಖು ಲೀಕ್‌ಆಯ್ತು ಈ ಪರೀಕ್ಷೆಯನ್ನು ಪೋಸ್ಟ್‌ಪೋನ್ ಮಾಡಿದೆ. 13-4-197 ರಲ್ಲಿ ಕಾಸ್ಟ್‌ಅಕೌಂಟಿಂಗ್ ಆಫ್ ಫೈನಲ್ ಬಿ. ಕಾಂ—ಸ್ಟ್ರಾಟಜಿಗ್ಯುಲೇಷನ್ಸ್—ಇದಕ್ಕೆ ಸಂಬಂಧಪಟ್ಟ ಪ್ರಶ್ನೆಪತ್ರಿಕೆ ಒಂದು ಗಂಟೆಗೆ ಲೀಕ್ ಆಗಿರುವುದು ಗೊತ್ತಾಯಿತು ಅಂದು 2 ಗಂಟೆಗೆ ಪರೀಕ್ಷೆಯಿತ್ತು, ಅವನ್ನು 24 ನೆಯ ತಾರೀಖಿಗೆ ಪೋಸ್ಟ್‌ಪೋನ್ ಮಾಡಿದೆ. ಇನ್ನೊಂದು ಮ್ಯಾನಸ್ಕ್ರಿಪ್ಟ್ ಕಾಪಿ ಆಫ್ ಫೈನಲ್ ಬಿ.ಎಸ್‌ಸಿ. ಮೇಜರ್ 2 ಮ್ಯಾಥಮ್ಯಾಟಿಕ್ಸ್ ಇದರ ಪರೀಕ್ಷೆ 14 ನೆಯ ತಾರೀಖು ಇತ್ತು, ಇದನ್ನು 26 ಕ್ಕೆ ಪೋಸ್ಟ್‌ಪೋನ್ ಮಾಡಿದೆ ಮ್ಯಾನಸ್ಕ್ರಿಪ್ಟ್ ಕಾಪಿ ಆಫ್ ಜೂಯಾಲಜಿ ಮೇಜರ್ ಪೇಪರ್ 3—ಇದರ ಪರೀಕ್ಷೆ 17 ನೆಯ ತಾರೀಖು ಇದ್ದುದನ್ನು 26 ಕ್ಕೆ ಪೋಸ್ಟ್‌ಪೋನ್ ಮಾಡಿದೆ. ಹೀಗೆ 4 ಪ್ರಶ್ನೆಪತ್ರಿಕೆಗಳು ಲೀಕ್ ಆಗಿರುವುದು ಅಧಿಕೃತವಾಗಿ ಸರಕಾರದ ಗಮನಕ್ಕೆ ಬಂದಿವೆ, ಲೀಕೇಜ್ ಆಗಿರುವುದಕ್ಕೆ ಏನು ಕಾರಣ ಎಂಬುದು ಗೊತ್ತಿಲ್ಲ. ಯೂನಿವರ್ಸಿಟಿಯು ಒಂದು ಇನ್‌ವೆಸ್ಟಿಗೇಷನ್ ಕಮಿಟಿ ಮಾಡಿ ತಕ್ಷಣವೇ ಏಕೆ ಹೀಗೆ ಲೀಕೇಜ್ ಆಯ್ತು ಎಂದು ವರದಿಯನ್ನು ತರಿಸಲು ಕ್ರಮ ಕೈಕೊಂಡಿದೆ. ಈ ಸಮಿತಿ ಥೇರ್ಮನ್ ನಾರಾಯಣರಾವ್. ಇತರ ಸದಸ್ಯರು ಜಿ. ವಿ. ಆಂಜನಪ್ಪ ಮತ್ತು ಚನ್ನಬಸವನಗೌಡ. ಇಷ್ಟೂ ಸಮಾಚಾರ ಯೂನಿವರ್ಸಿಟಿಯಿಂದ ಬಂದಿದೆ. ಇದು ಬಹಳ ವಿಷಾದಕರವಾದ ವಿಚಾರ ಹೀಗಾಗಿರುವುದು. ಎಲ್ಲಿ ದೋಷವಿದೆ, ಏಕೆ ಹೀಗಾಯಿತು, ಯಾವ ಜಾಗದಲ್ಲಿ ಇದು ನಡೆಯಿತು ಎಂಬುದನ್ನು ಹೇಳತಕ್ಕದ್ದು ಬಹಳ ಕಷ್ಟ. ಗುಂಪುಗಾರಿಕೆ ಇದೆ ಎಂದು ಕೇಳಿದ್ದೇನೆ. ಬಹುಶಃ ಇದಕ್ಕೆ ಉನ್ನತ ಮಟ್ಟದ ಅಧ್ಯಾಪಕವರ್ಗ ಅಥವಾ ಅಧಿಕಾರವರ್ಗ ಹೆಚ್ಚಿನ ಆಸಕ್ತಿ ವಹಿಸಿದ್ದರೆ ಯಾವ ಒಂದು ಕಂಟ್ರೋಲರ್‌ದ್ದರೂ ಇದನ್ನು ಸರಿಪಡಿಸುವುದಕ್ಕಾಗುವುದಿಲ್ಲ ಎಂದು ಕಾಣುತ್ತದೆ. ಹೇಗಾದರೂ ಇರಲಿ, ಎಲ್ಲಿ ದೋಷವಿದೆ, ಯಾರು ಇದಕ್ಕೆ ಜವಾಬ್ದಾರರು ಎಂದು ಮೊದಲು ತಿಳಿಯಬೇಕಾಗಿದೆ. ಹೀಗಾಗಿರುವುದು ವಿಷಾದಕರ. ಹೀಗಾಗದಹಾಗೆ ಮುಂದೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಕೊಳ್ಳುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಸಚಿವರು ಹೇಳಿದ 4 ಪ್ರಶ್ನೆಪತ್ರಿಕೆಗಳಲ್ಲದೆ ಇನ್ನು ಕೆಲವು ಲೀಕ್ ಆಗಿವೆ. 14-4-1973 ರಲ್ಲಿ 2 ರಿಂದ 5 ಗಂಟೆವರೆಗೆ ಇಂಡಸ್ಟ್ರಿಯಲ್ ಆರ್ಗನೈಜೇಷನ್ ಫೈನಲ್ ಬಿ.ಕಾಂ—I ಈ ಪ್ರಶ್ನೆಪತ್ರಿಕೆ ಬೈದಾಗಿವೆ, ಫೈನಲ್ ಬಿ.ಎಸ್‌ಸಿ. ಜಿಯಾಲಜಿ ಮೈನರ್ ಈ ಪ್ರಶ್ನೆಪತ್ರಿಕೆ ಸಹ ಬೈದಾಗಿದೆ.

Sri A. R. BADARINARAYANA.—I have received a letter from the Controller of Examinations that only 4 papers have leaked out. I am not in a position to accept or reject the information given by the Hon. Member Sri Siddappa.

Sri H. S. SIDDAPPA.—My child is attending this examination and has written to me saying that the examination has been postponed and want money immediately.

Sri A. R. BADARINARAYANA.—I do not dispute your information. But the Controller of Examinations has written to me that only 4 papers have been leaked out.

ಶ್ರೀ ಎಚ್. ಎನ್. ಸಿದ್ದಪ್ಪ.—ಒಂದು ಸಮಿತಿ ಮಾಡಿ ಎನ್‌ಕ್ವೈರಿ ಮಾಡುವುದಕ್ಕಿಂತ ಜುಡಿಷಿಯರ್ ಪ್ರೋಬ್ ಮಾಡಿದರೆ ಮಂತ್ರಿಗಳಿಗೆ ಒಳ್ಳೆಯ ಹೆಸರು ಬರುವುದು. ಇಂಥ ಒಳ್ಳೆಯ ವಿದ್ಯಾಮಂತ್ರಿಗಳಿರುವಾಗ ಅನ್ಯಾಯವಾಗಬಾರದು. ಇದರಿಂದ ವೈಸ್ಚಾನರು ವಿಶ್ವವಿದ್ಯಾನಿಲಯದ ಕೀರ್ತಿಗೆ ಕಳಂಕ ಬರುವುದು. ಯಾರೇ ತಪ್ಪು ಮಾಡಿದ್ದರೂ ಇದರ ಬಗ್ಗೆ ಕಟುತರವಾದ ಕ್ರಮ ತೆಗೆದುಕೊಳ್ಳಬೇಕು.

Disfiguring the Statue of Dr. Ambedkar at Bidar

Sri MALLIKARJUNA KHARGE.—I have sent two calling Attention notices—one is about the shortage of foodgrains and another is about the disfiguring of the statue of Dr. Ambedkar at Bidar. I want to know what has happened to them.

MADAM SPEAKAR.—I have called for a report.

Sri C. M. ARUMUGHAM.—I may be permitted to raise an issue and at the same time I request you to show a little concession to this issue. This is about the disfiguring of Dr. Ambedkar's Statue at Bidar.

MADAM SPEAKER.—I have called for a report in this regard. What applies to others will also apply equally to Sri Arumugham also. Where is the special concession for this ?

Sri C. M. ARUMUGHAM.—It has been raised even in Parliament. This is not the first time this has happened. At Humnabad the Statue of Dr. Ambedkar was disfigured. A new statue of Dr. Ambedkar was installed bythe Chief Minister himself. There is a lot of force in saying that there was some purposeful attempt by some people to disfigure the statue at Bidar also. It is not a matter to be treated as Calling Attention and this is not a matter for the Government to get the information at their leisure. It is a very serious matter because this is not the first time this has been done. This is the second time this attempt has been made at Bidar. This has been raised in Parliament. I want this disfiguring of the statue of Dr. Ambedkar should be considered as an important matter. It should not be treated lightly. Certain matters should not be treated as Calling Attention Notice, The Government should have the information of the important occurance of this type at their finger tips. It is not the worth the name of the Minister concerned to allow such things to happen.

MADAM SPEAKER.—The hon. member need not be emotional. All these things will be attended to by the Government. We have got certain rules and procedure to be followed.

Sri C. M. ARUMUGHAM.—I want to tell you that I have been very much wounded on account of this incident.

MADAM SPEAKER.—Everybody is wounded. The member can raise this during discussion on demands.

Sri C. M. ARUMUGHAM.—I want a good treatment at your hands to this issue. I am not going against your ruling. It is a very vital issue. The Government wants some time to call for the information in this regard. But there are certain things which the Government is bound to receive information in advance.

Sri M. S. KRISHNAN.—Madam Speaker, you were pleased to say that this issue may be discussed during discussion on demands.

MADAM SPEAKER.--He is saying that the Government is not worth the name. Such things could be brought during discussion of the demand.

Sri M. S. KRISHNAN.—As Hon. Member Armugam pointed out this is a matter of serious concern. Some people it seems are persisting in doing these ugly things. They want to deframe the fair name of Dr. Ambedkar. The Chief Minister himself should have come forward to make a statement before it was raised in this House. But neither the Chief Minister nor anybody seem to be concerned with that at all. They do not worry at all. This has been brought to the notice of the concerned Minister about 8 days back. 8 days time is quite ample. I do not understand why the Government is not realising the importance of this issue. As rightly put by the Hon. Member, Sri Arumugam this is not a matter of calling attention. This issue should have been given a different treatment *i. e.*, the Chief Minister must have come out with a statement immediately to-day. If he is not able to do it to-day, he may do it on Monday at least. This is our humble suggestion.

ಶ್ರೀ ಕೋಣಂದೂರು ಲಿಗಪ್ಪ. – ರಾಜ್ಯಾಂಗ ಸೃಷ್ಟಿಕರ್ತರಾದಂಥ ಡಾಕ್ಟರ್ ಅಂಬೇಡ್ಕರ್ ಅವರಿಗೆ ಭಾವ ಚಿತ್ರಕ್ಕೆ ಈ ರೀತಿ ಮಾಡುವುದು ರಾಜ್ಯಾಂಗಕ್ಕೆ ಅಪಮಾನ ಮಾಡಿದಂತಾಗುತ್ತದೆ. ಇದರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಇದು ಅಕ್ಷಮ್ಯ ಅಪರಾಧ, ಸರ್ಕಾರ ಇದರ ಬಗ್ಗೆ ಏನೂ ಮಾಹಿತಿಯನ್ನು ತೆಗೆದುಕೊಂಡಿಲ್ಲ ಎಂದರೆ....

† ಶ್ರೀ ಕೆ. ಎಚ್. ಪಾಟೀಲ್ (ಅರಣ್ಯ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು).—ಸರ್ಕಾರದವರಿಗೆ ಡಾಕ್ಟರ್ ಅಂಬೇಡ್ಕರ್ ಅವರ ವಿಷಯವಾಗಿ ಮಾನ್ಯ ಎದುರು ಪಕ್ಷದ ಸದಸ್ಯರಿಗೆ ಇರುವಷ್ಟು ಮತ್ತು ಅದಕ್ಕು ಹೆಚ್ಚಿನ ಗೌರವ, ಆದರ ಇದೆ; ಡಾಕ್ಟರ್ ಅಂಬೇಡ್ಕರ್ ಅವರ ಭಾವ ಚಿತ್ರ ಕ್ಯಾಗಲೀ ಅಥವಾ ಅವರ ಮೂರ್ತಿಗಾಗಲೀ ನಾವುಂಸ್ತು ಅವಮಾನಕರವಾದ ರೀತಿಯಲ್ಲಿ ಆಗಿದ್ದರೆ, ಆ ವರ್ತನೆಯನ್ನು ಸರ್ಕಾರ ಸಹಿಸುವುಕ್ಕಾಗುವುದಿಲ್ಲ. ಮಾನ್ಯ ಕಾರ್ಮಿ ಅವರು ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ.ಮಾನ್ಯ ಆರ್ಮುಗಂ ಅವರು ಇದರ ಬಗ್ಗೆ ಹೇಳಿದ್ದಾರೆ. ಸರ್ಕಾರ ಕೇವಲ ತತ್ವದ ಆಧಾರದ ಮೇಲೆ, ಪೊಲೀಸ್ ಠೋರಣೆಯ ಮೇಲೆ ಹೇಳುವುದಾರೆ ಒಂದು ನಿಮಿಷ ವನ್ನು ಕಳೆಯುದೆ, ನಾವು, ಇದರ ಬಗ್ಗೆ ಭಾಷಣ ಮಾಡಬೇಕಾದರೆ ಮತ್ತು ಹೇಳಿಕೆಯನ್ನು ಕೊಡ ಬೇಕಾದರೆ ಪ್ರತ್ಯಕ್ಷವಾಗಿ ಏನಾಗಿದೆ ಎನ್ನುವುದನ್ನು ತಿಳಿದುಕೊಂಡು ಹೇಳಬೇಕಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬೀದರ ಪರಿಸ್ಥಿತಿಯನ್ನು ಗಮನಿಸಲಿಕ್ಕೆ ಕಾತುರರಾಗಿದ್ದಾರೆ. ಅವರು ಬಂದೊಡನೆ ಇದನ್ನು ತಿಳಿಸಿ, ರಿಪೋರ್ಟು ಬಂದೊಡನೆ ಈ ಸದನದ ಎದುರಿಗೆ ರಿಪೋರ್ಟನ್ನು ಮಂಡಿಸುತ್ತೇವೆ. ಒಂದು ವೇಳೆ ರಿಪೋರ್ಟು ಬಾರದಿದ್ದರೆ' ಹೇಳಿಕ್ಕೆ ಬರಲಿಕೆ ಆಗುವುದಿಲ್ಲ. ವರದಿ ಬಂದ ಕೂಡಲೇ ಅದೇ ದಿವಸ ತಡಮಾಡದೆ ಚೀಫ್ ಮಿನಿಸ್ಟರ್‌ಗೆ ಹೇಳಿ ವರದಿಮಾಡುವುದಕ್ಕೆ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರಕ್ಕೆ ಬೇಕಾದಷ್ಟು ಸಮಯತ್ತು ಇದ್ದರೂ ಕೂಡ ವರದಿ ಬಂದ ಕೂಡಲೇ ಹೇಳುತ್ತೇವೆ ಎಂದು ಹೇಳುತ್ತಾರೆ, ಈಗಾಗಲೇ 8 ದಿವಸ ಕಳೆದಿದೆ. ಸೋಮವಾರ ಸ್ಟೇಟ್‌ಮೆಂಟ್ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಒಂದು ವೇಳೆ ಇವತ್ತೇ ಎಂಟು ಗಂಟೆಗೆ ವರದಿ ಬಂದರೆ ಸಾಯಂಕಾಲ ಐದು ಗಂಟೆಗೆ ಸ್ಟೇಟಮೆಂಟ್ ಕೊಡುತ್ತೇವೆ, ಸೋಮವಾರ ವರದಿ ಬರಲಿಲ್ಲ ಎಂದರೆ ಪುನಃ ಸ್ಟೇಟ್‌ಮೆಂಟ್ ಕೊಡಬೇಕೆಂದು ಎನ್‌ಕೋರ್ಸ್ ಮಾಡುತ್ತೀರಿ. ಆದ್ದರಿಂದ ವರದಿ ಬಂದ ಕೂಡಲೇ ಒಂದು ನಿಮಿಷವೂ ಕಳೆಯದೆ ಈ ಸಭೆಯ ಮುಂದೆ ಅದನ್ನು ಇಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ರೂಲ್ 312ರ ಕೆಳಗೆ ಒಂದು ನೋಟೀಸನ್ನು ಕಳು ಹಿಸಿದ್ದೇನೆ, ಮಾನ್ಯ ಚನ್ನಬಸಪ್ಪನವರು ಇವ್ವಾರೆ.

ಅಧ್ಯಕ್ಷರು.—ಚೀಫ್ ಮಿನಿಸ್ಟರ್‌ಗೆ ಹೇಳಿ ಕಳುಹಿಸಿದೆ, ಸೋಮವಾರದ ದಿವಸ ಹೇಳುತ್ತೇನೆಂದು ಹೇಳಿದರು.